## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ. ಸಂಖ್ಯೆಃ 256/2023

**ಪಿರ್ಯಾದಿ** : ಶ್ರೀ ಬಾಸ್ಕರ್ ಗೌಡ ಹೆಚ್.ಡಿ.
ಬಿನ್ ಧರಣೇಗೌಡ,
ವಯಸ್ಸು ಸುಮಾರು 58 ವರ್ಷ,
ವಾಸಃ ಹೊಸೂರು, ಮಾವಿನಕೆರೆ
ಗ್ರಾಮ, ಕಳಸ ಹೋಬಳಿ ಮತ್ತು
ಅಂಚೆ, ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**ಆರೋಪಿ** : ಶ್ರೀ ನಿಯಾಜ್ ಅಹಮ್ಮದ್
ಬಿನ್ ಸಾಯಿರಬ್ಬ,
ವಯಸ್ಸುಃ 48 ವರ್ಷ,
ವಾಸಃ ಕೆ.ಎಂ.ರಸ್ತೆ, ಕಳಸ ಪಟ್ಟಣ
ಮತ್ತು ಅಂಚೆ, ಮೂಡಿಗೆರೆ ತಾಲ್ಲೂಕು.

### ಆಪಾದನೆಯ ಸಾರಾಂಶ

ನಾನು ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ–

ಆರೋಪಿಯಾದ ನೀವು ಪಿರ್ಯಾದುದಾರರೊಂದಿಗೆ ಈ ನ್ಯಾಯಾಲಯದ ಪ್ರಕರಣ ಸಂಖ್ಯೆಃ ಸಿ.ಸಿ.417/2020 ರಲ್ಲಿ ರಾಜಿ ಮಾಡಿಕೊಂಡು ಅದರನ್ವಯ ಹಣವನ್ನು ಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಳಸ ಶಾಖೆಯ ಚೆಕ್ ಸಂಖ್ಯೆಃ 761293, ದಿನಾಂಕ 05.12.2022,

ರೂ.2,10,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಬ್ಯಾಂಕಿನಲ್ಲಿ ಜಮೆಗಾಗಿ ಸಲ್ಲಿಸಿದಾಗ, "**Funds insufficient"** ಮತ್ತು "**Drawer Signature Differs"** ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 23.12.2022 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು **ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

*(ಆರೋಪಿಗೆ ದಿನಾಂಕ 12.06.2023 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

**Sd/-**

ಕಳಸ — ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ದಿನಾಂಕಃ 12.06.2023 — ಜೆ.ಎಂ.ಎಫ್.ಸಿ, ಮೂಡಿಗೆರೆ.